# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 541 (20) |
| 2. ಸದಸ್ಯರ ಹೆಸರು | : | ಶ್ರೀ ಯು.ಬಿ. ವೆಂಕಟೇಶ್ (ನಾಮನಿದೇಶನ ಹೊಂದಿದವರು) |
| 3. ಉತ್ತರಿಸುವ ದಿನಾಂಕ | : | 16-09-2021 |
| 4. ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಬಸವನಗುಡಿ ವಿಧಾನ ಸಭಾ ಕ್ಷೇತ್ರದ 'ವ್ಯಾಪ್ತಿಯಲ್ಲಿ ಬಿಬಿಎಂಪಿ ವತಿಯಿಂದ ನಿರ್ಮಾಣ ಮಾಡಿರುವ ಸಾಂಸ್ಕೃತಿಕ ಭವನ / ರಂಗಮಂದಿರಗಳು / ಕ್ರೀಡಾ ಚಟುವಟಿಕೆಗಳಿಗಾಗಿ ಕಟ್ಟಡಗಳನ್ನು ಮೀಸಲಿರಿಸಲಾಗಿದೆಯೇ (ವಾರ್ಡ್‌ವಾರು ವಿವರಗಳನ್ನು ಒದಗಿಸುವುದು;) | ಬೆಂಗಳೂರು ನಗರದ ಬಸವನಗುಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಿ.ಬಿ.ಎಂ.ಪಿ., ಯೋಜನೆ (ದಕ್ಷಿಣ) ವತಿಯಿಂದ ವಾರ್ಡ್ ಸಂಖ್ಯೆ 155 ರಲ್ಲಿನ ಕೆ.ಹೆಚ್. ಕಲಾಸೌಧ ಸಾಂಸ್ಕೃತಿಕ ಭವನ, ರಾಜೀವ್‌ಗಾಂಧಿ ಕ್ರೀಡಾಂಗಣ ಮತ್ತು ಜಿಂಕೆ ಪಾರ್ಕ್ ಒಳಗೆ ಇರುವ ಗಾಜಿನ ಮನೆ ಹಾಗೂ 04 ಮಳಿಗೆಗಳನ್ನು ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಿಗಾಗಿ ಮೀಸಲಿರಿಸಲಾಗಿದೆ. ಇವುಗಳಲ್ಲಿ ಕೆ.ಹೆಚ್. ಕಲಾಸೌಧ ಸಾಂಸ್ಕೃತಿಕ ಭವನ ಮತ್ತು ಜಿಂಕೆ ಪಾರ್ಕ್ ಒಳಗೆ ಇರುವ ಗಾಜಿನ ಮನೆ ಹಾಗೂ 04 ಮಳಿಗೆಗಳಿಗೆ ಇ-ಪ್ರಕ್ಯೂರ್‌ಮೆಂಟ್ ಮುಖೇನ ಟೆಂಡರ್ ಆಹ್ವಾನಿಸಿ, ಅರ್ಹ ಬಿಡ್ಡುದಾರರಿಗೆ ಗುತ್ತಿಗೆ ಕಾರ್ಯದೇಶವನ್ನು ನೀಡಲಾಗಿರುತ್ತದೆ. |
| ಆ) | ಈ ಕೇಂದ್ರಗಳ ನಿರ್ವಹಣೆಯನ್ನು ವಹಿಸಿಕೊಂಡಿರುವ ಸಂಸ್ಥೆಗಳು ಯಾವುವು (ಕಳೆದ ಮೂರು ವರ್ಷಗಳ ಮಾಹಿತಿ ಒದಗಿಸುವುದು) | ಈ ಕೇಂದ್ರಗಳ ನಿರ್ವಹಣೆಯನ್ನು ವಹಿಸಿಕೊಂಡಿರುವ ಸಂಸ್ಥೆಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ. |

| | |
|---|---|
| ಕೆ.ಹೆಚ್.ಕಲಾಸೌಧ ಸಾಂಸ್ಕೃತಿಕ ಭವನ (ಅವಧಿ 2017-18 ರಿಂದ 2020-21) ಗುತ್ತಿಗೆ ಅವಧಿಯು ಮುಗಿದಿರುತ್ತದೆ. | Maastek (Prop.T.R. Vijay) No.2472, 15th main, Kumaraswamy Layout, B-78. |
| ರಾಜೀವ್‌ಗಾಂಧಿ ಕ್ರೀಡಾಂಗಣ | ಸಾರ್ವಜನಿಕ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಕ್ರೀಡಾ ಚಟುವಟಿಕೆಗಳ ಉದ್ದೇಶಕ್ಕಾಗಿ ಬಳಸಲಾಗುತ್ತಿದ್ದು, ಯಾವುದೇ ಖಾಸಗಿ ಸಂಸ್ಥೆಯವರಿಗೆ ಗುತ್ತಿಗೆ ನಿರ್ವಹಣೆಯನ್ನು ವಹಿಸಿರುವುದಿಲ್ಲ. |
| ಜಿಂಕೆ ಪಾರ್ಕ್ ಒಳಗೆ ಇರುವ ಗಾಜಿನ ಮನೆ ಹಾಗೂ 4 ಮಳಿಗೆಗಳು. (ಅವಧಿ 09/01/2015 ರಿಂದ 09/01/2018) ಗುತ್ತಿಗೆ ಅವಧಿಯು ಮುಗಿದಿರುತ್ತದೆ. | M/s,Triloka Builders, (Prop M.Ramesh) No.2, G.S.Shivarudrappa Road, 9th Main, 1st Cross, Hanumanthanagar, Bengaluru-19. |

...2/-

<table>
<tr>
<td></td>
<td>ಈ ಕೇಂದ್ರಗಳಿಂದ ಸರ್ಕಾರಕ್ಕೆ ಬರುತ್ತಿರುವ ವಾರ್ಷಿಕ ಆದಾಯವೆಷ್ಟು; ಖಾಸಗಿ ವ್ಯಕ್ತಿಗಳು ಈ ಕೇಂದ್ರಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td>
<td>ಈ ಕೇಂದ್ರಗಳಿಂದ ಸರ್ಕಾರಕ್ಕೆ ಬರುತ್ತಿರುವ ವಾರ್ಷಿಕ ಆದಾಯದ ವಿವರಗಳು ಈ ಕೆಳಕಂಡಂತೆ ಇರುತ್ತದೆ.
<table>
<tr><td>ಕೆ.ಹೆಚ್.ಕಲಾಸೌಧ ಸಾಂಸ್ಕೃತಿಕ ಭವನ</td><td>ರೂ. 12,49,979/- (ಅವಧಿ 2017-18ರಿಂದ 2020-21 ಮೂರು ವರ್ಷಗಳ ಗುತ್ತಿಗೆ ಆದಾಯ)</td></tr>
<tr><td>ರಾಜೀವ್‌ಗಾಂಧಿ ಕ್ರೀಡಾಂಗಣ</td><td>ರೂ. 1,80,000/- (ಅವಧಿ 2018-19ರಿಂದ 2020-21)</td></tr>
<tr><td>ಜಿಂಕೆ ಪಾರ್ಕ್ ಒಳಗೆ ಇರುವ ಗಾಜಿನ ಮನೆ ಹಾಗೂ 4 ಮಳಿಗೆಗಳು.</td><td>ರೂ. 2,88,000/- (ಅವಧಿ 09/01/2015 ರಿಂದ 09/01/2018)</td></tr>
</table>
ಇವುಗಳನ್ನು ಯಾವುದೇ ಖಾಸಗಿ ವ್ಯಕ್ತಿಗಳಾಗಲೀ, ಸಂಸ್ಥೆಯವರಾಗಲೀ ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.</td>
</tr>
<tr>
<td>ಈ)</td>
<td>ಬಂದಿದ್ದಲ್ಲಿ, ಈ ಸಂಬಂಧ ಸರ್ಕಾರ ಕೈಗೊಂಡ ಕ್ರಮಗಳೇನು?</td>
<td>ಉದ್ಭವಿಸುವುದಿಲ್ಲ.</td>
</tr>
</table>

**ನಅಇ 171 ಬಿಬಿಎಲ್ 2021**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ